ಹಣದ ಬಗ್ಗೆಯೂ ಅಷ್ಟೇ: ಕೊಡುವ ಹಣದಲ್ಲಿ ಯಾವು ಯಾವುದಕ್ಕೆ ಎಷ್ಟೆಷ್ಟು ಕೊಟ್ಟೆ ಎಂದು ಬಾಯಿ ಲೆಕ್ಕ ಒಪ್ಪಿಸುತ್ತಾನೆ. ಉಳಿದ ಹಣ ಎಣಿಸಿ ನನ್ನಾಕೆಯ ಕೈ ಮೇಲೆ ಇಡುತ್ತಾನೆ. ತಿರುಗಾಟದ ಅವನ ತೆವಲು ಬಿಟ್ಟರೆ ಮತ್ತೆ ಯಾವುದರಲ್ಲಿಯೂ ತಿರುಬೋಕಿಯನ್ನು ತೆಗೆದು ಹಾಕುವಂತಿಲ್ಲ. ತಿರುಗಾಟದ ಹುಚ್ಚನ್ನು ಅವನು ತೆಗೆದು ಹಾಕುವವನಲ್ಲ.

ಅವನ ಅಮ್ಮನಿಗೆ 'ತನ್ನ ಮಗ ಎಲ್ಲರಂತೆ ಬದುಕಬೇಕು. ಒಂದು ನೌಕರಿ ಅಂತ ಅದು ಸಣ್ಣದೇ ಆಗಿರಲಿ ದೊಡ್ಡದೇ ಆಗಿರಲಿ ಮಾಡಬೇಕು. ಹಾಗೆಂದು ಅವನೇನೂ ದುಡಿದು ತನ್ನನ್ನು ಸಾಕಬೇಕು ಅಂತಲ್ಲ. ಅವನ ದುಡಿಮೆಯ ಹಣ ಅವನದು. ಅದರಲ್ಲಿ ತನಗೆ ಬಿಡಿಗಾಸೂ ಬೇಡ ಎನ್ನುವ ನಿಲುವು. ಆ ಬಗ್ಗೆ ನನ್ನಲ್ಲಿಯೂ ಹಲವು ಬಾರಿ ಹೇಳಿಕೊಂಡಿದ್ದಾಳೆ ಅನುಸೂಯಾ.

'ಸರ್..ತಮಗೆ ಎಷ್ಟೆಲ್ಲಾ ಮಂದಿಯ ಪರಿಚಯ ಉಂಟು. ನೀವು ಒಂದು ಮಾತು ಹೇಳಿದರೆ ಯಾರೂ `ಇಲ್ಲ ಎನ್ನಲಾರರು. ದೊಡ್ಡ ಮನಸ್ಸು ಮಾಡಿ ನನ್ನ ಮಗನಿಗೆ ಯಾವುದಾದರೊಂದು ಕೆಲಸ ಕೊಡಿಸಿ. ನಿಮ್ಮ ಉಪಕಾರವನ್ನು ನಾನು ಸಾಯುವವರೆಗೂ ಸ್ಮರಣೆಯಲ್ಲಿ ಇಟ್ಟುಕೊಂಡಿರುತ್ತೇನೆ' ಎನ್ನುತ್ತಿದ್ದಳು ಅನುಸೂಯಾ.

ತಿರುಬೋಕಿಗೆ ಕೆಲಸ ಕೊಡಿಸುವುದೇನೂ ನನಗೆ ಕಷ್ಟದ್ದಾಗಿರಲಿಲ್ಲ. ನನ್ನ ಆಫೀಸ್‌ನಲ್ಲಿಯೇ ಕೊಡಿಸಬಹುದಾಗಿತ್ತು. ಆದರೆ... ಈ ತಿರುಬೋಕಿ ಎಷ್ಟು ದಿನಾಂತ ಆ ಕೆಲಸಕ್ಕೆ ಅಂಟಿಕೊಂಡಿದ್ದಾನು? ಇವೊತ್ತು ಸೇರಿ.. ನಾಳೆ ಬಿಟ್ಟ ಅಂತಾದರೆ.. ಅವನ ತಿರುಗಾಟದ ಚಪಲ ಅಂಥಾದ್ದು. ಆದರೂ ಅನುಸೂಯಾಳಿಗೆ ಸಮಾಧಾನವಾಗಲಿ ಅಂತ ಒಂದು ಕೆಲಸವನ್ನು ತಿರುಬೋಕಿಗೆ ಕೊಡಿಸಿದೆ.

'ಇಂಥಾ ಕಡೆ..ಇಂಥಾ ಕೆಲಸ..' ಎಂದೂ ಅವನಿಗೆ ತಿಳಿಸಿದೆ.

'ಸರಿ ಸರ್..' ಎಂದ ಆತ 'ಸರ್ ವಾರಕ್ಕೆ ಎಷ್ಟು ದಿನ ರಜಾ?' ಕೇಳಿದ.

'ಇದೇನಪ್ಪಾ ಹೀಗೆ ಕೇಳುತ್ತೀಯಾ?ಎಲ್ಲಾ ಕಡೆಯೂ ಇರುವಂತೆ ವಾರಕ್ಕೆ ಒಂದು ದಿನ ರಜಾ.. ಭಾನುವಾರ..' ಎಂದೆ ನಾನು.

`ಸರಿ ಸರ್..ಆ ಭಾನುವಾರ..ರಜಾ ದಿನದಂದು ನಾನು ಕೆಲಸ ಮಾಡುತ್ತೇನೆ. ಉಳಿದ ಆರು ದಿನ ನನಗೆ ರಜಾ ಎಂದುಬಿಟ್ಟ ಭೂಪ!

ಕೆಲವೊಮ್ಮೆ ತಿರುಬೋಕಿಯ ತಿರುಗಾಟ ಒಂದೆರಡು ದಿನಕ್ಕೇ ಮುಗಿಯುತ್ತದೆ. ಮತ್ತೆ ಕೆಲವು ಬಾರಿ ವಾರ; ಇನ್ನು ಕೆಲವು ಬಾರಿ ಹದಿನೈದಿಪ್ಪತ್ತು ದಿನಗಳೂ ಆದಾವು. ತಿಂಗಳುಗಟ್ಟಲೆ ಸಂಚಾರ ನಿರತನಾಗಿದ್ದರೆ 'ತಾನು ಇಂಥಲ್ಲಿಗೆ ಹೋಗಿದ್ದೇನೆ. ಇಂಥಲ್ಲಿ ಇದ್ದೇನೆ. ಚಿಂತೆ ಬೇಡ ಎಂದು ಒಂದೆರಡು ಸಾಲು ಗೀಚಿದ ಕಾರ್ಡ್ ಕಳಿಸುತ್ತಾನೆ. ಹಾಗಾಗಿ ತನ್ನ ಮಗ ಹೋದವನು ಹೋಗಿಯೇಬಿಟ್ಟ ಎಂದು ಅನುಸೂಯಾ ಕಳವಳ ಪಡುತ್ತಿರಲಿಲ್ಲ. ಬರುತ್ತಾನೆ.. ಇಂದೋ ನಾಳೆಯೋ ಬಂದೇ ಬರುತ್ತಾನೆ ಎನ್ನುವ ಸಮಾಧಾನ ಅವಳದು. ಜೊತೆಗೆ ಬಂದವನೇ ಮತ್ತೆ ಹೊರಡುವವ ತನ್ನ ಮಗ ಎಂಬುದನ್ನೂ ಅವಳು ಬಲ್ಲಳು.

ಮಗನಿಗೆ ಒಂದು ಮದುವೆ ಮಾಡಿದರೆ ಈ ತಿರುಗಾಟ ಕಡಿಮೆ ಮಾಡಿದರೂ ಮಾಡಬಹುದು ಅನ್ನಿಸಿತು ಅನುಸೂಯಾಳಿಗೆ.

ಈ ಬಗ್ಗೆ ಮಗನ ಬಳಿ ಪ್ರಸ್ತಾಪಿಸಿದ್ದೂ ಆಯಿತು. ತಾಯಿಯ ಯಾವ ಮಾತಿಗೂ ವಿರೋಧ ಹೇಳಿದವನಲ್ಲ ತಿರುಬೋಕಿ. ಈ ಮಾತಿಗೂ 'ಆಯಿತಮ್ಮಾ.. ಹುಡುಗಿಯನ್ನು ನೀನು ನೋಡು. ಸರ್ರು ಮತ್ತು ಅತ್ತೆ ಇಬ್ಬರೂ ನೋಡಲಿ. ನಿಮಗೆ ಹುಡುಗಿ ಒಪ್ಪಿಗೆ ಆದಳು ಅಂತಾದರೆ ನನಗೂ ಒಪ್ಪಿಗೆಯೇ. ಇನ್ನು ಲೋಕಾರೂಢಿ, ಶಾಸ್ತ್ರ ಅಂತಾದರೆ ನಾನೂ ಹುಡುಗಿಯನ್ನು ನೋಡುತ್ತೇನೆ. ಅವಳೂ ನನ್ನನ್ನು ನೋಡಲಿ. ಹಾಗೆ ನೋಡುವಾಗಲೇ ನಾನು ಹುಡುಗಿಯ ಬಳಿ ಸ್ಪಷ್ಟವಾಗಿ ಹೇಳಿಬಿಡುತ್ತೇನೆ. 'ನನ್ನ ಹೆಸರು ತಿರುಬೋಕಿ. ನನ್ನ ವೃತ್ತಿಯೂ ಅದೇ. ನಾನು ದೇಶ ಸುತ್ತುವವ. ನಿನಗೆ ಇಂಥಾ ಅಲೆಮಾರಿ ಗಂಡ ಆದೀತು ಅಂದರೆ ನಾನು ತಾಳಿ ಕಟ್ಟುತ್ತೇನೆ. ಮದುವೆಯಾದ ಮೇಲೆ ನನ್ನೊಂದಿಗೆ ನೀನೂ ನಾನು ಹೋಗುವಲ್ಲಿಗೆ ಬರುತ್ತೀಯಾದರೆ ಬಾ. ಇಲ್ಲಾ.. ಬರುವುದಿಲ್ಲ ಅಂದರೆ ನನ್ನದೇನೂ ಒತ್ತಾಯವಿಲ್ಲ. ಮನೆಯಲ್ಲಿ ಅಮ್ಮ ಇರುತ್ತಾಳೆ. ಅವಳೊಂದಿಗೆ ಇರಬಹುದು..' ಎಂದ ತಿರುಬೋಕಿ ಮಹಾಶಯ.

'ಸರಿಯಪ್ಪಾ.. ಅವಳು ನೀವು ಹೋಗುವಲ್ಲಿಗೆಲ್ಲಾ ತಾನೂ ಬರುತ್ತೇನೆ ಎಂದರೆ ಸರಿಯಪ್ಪಾ.. ನೀನು ಕರೆದುಕೊಂಡು ಹೋದೀಯಾ. ಆದರೆ..ತಾನು ಬರುವವಳಲ್ಲ ಎಂದರೆ..?'

'ಅದಕ್ಕೇನು ಚಿಂತೆ? ನಿನ್ನ ಜೊತೆ ಮನೆಯಲ್ಲಿಯೇ ಇರುತ್ತಾಳೆ.. ನೀನು ಶಾಲೆ ಪಾಲೆಗೆ ಹೋದಾಗ ಸರ್ ಮನೆಗೆ ಹೋಗಿ ಅತ್ತೆಯ ಜೊತೆಗೆ ಇರುತ್ತಾಳೆ' ಮಗನ ಸಮಜಾಯಿಷಿ.

`ಹರೆಯದ ಹುಡುಗಿ.ದೇಹದ ಕಾವು.ಅದನ್ನು ತಣಿಸಲು ಗಂಡ ಮನೆಯಲ್ಲಿ ಇಲ್ಲ. ಕಾವು ತಣಿಸಿಕೊಳ್ಳಲು ಮತ್ತೊಬ್ಬ ಗಂಡನ್ನು ಹುಡುಕಿಕೊಂಡು ಹೊರಟರೆ..?' ಎಂದಳು ತಾಯಿ.

'ಹಾಗಿದ್ದರೆ ಅವಳಿಗೆ ಮದುವೆಗೆ ಮೊದಲೇ ಹೀಗೆ ಹೇಳಿದರೆ ಆಯಿತು: ದೇಹದ ಕಾವು ತಣಿಸುವ ಗಂಡನ್ನೇ ನೀನು ಹುಡುಕಿಕೋ; ತಾಳಿ ಕಟ್ಟಿ ಅಲೆದಾಡುವ ಗಂಡನನ್ನಲ್ಲ ಅಂತ' ನಗುತ್ತಾ ಅಂದುಬಿಟ್ಟ ಮಗರಾಯ.

ಇದನ್ನೆಲ್ಲಾ ನನ್ನ ಹಾಗೂ ನನ್ನಾಕೆಯ ಬಳಿ ಹೇಳಿಕೊಂಡಳು ಅನುಸೂಯ.

'ಮಗನಿಗೆ ಮದುವೆ ಮಾಡಬೇಕು. ಮದುವೆ ಮಾಡಿದ ಮೇಲಾದರೂ ತನ್ನ ತಿರುಗಾಟದ ಚಟ ಕಡಿಮೆ ಮಾಡಬಹುದು ಅಂದುಕೊಂಡೆ ಸರ್. ಆದರೆ.. ಇವನ ಮಾತು ಕೇಳಿ ಆ ವಿಷಯದಲ್ಲಿ ಮುಂದುವರಿಯುವುದು ಬೇಡ ಅನ್ನಿಸಿದೆ. ಯಾವುದೋ ಮನೆಯ ಹುಡುಗಿಯನ್ನು ಸೊಸೆಯನ್ನಾಗಿಸಿಕೊಂಡು ದಿನನಿತ್ಯ ಗಂಡನನ್ನು ಕಾಣದೆ ಅವಳು ಕಣ್ಣೀರು ಸುರಿಸುವುದನ್ನು ನೋಡುವುದಾದರೂ ಹೇಗೆ ಹೇಳಿ ಸರ್. ನಿಜ..ಮನೆಗೆ ಸೊಸೆ ಬರಬೇಕು. ಮೊಮ್ಮಗನನ್ನೋ, ಮೊಮ್ಮಗಳನ್ನೋ ಅವಳು ಹೆತ್ತು ಕೊಡಬೇಕು. ಮೊಮ್ಮಗ ಅಥವಾ ಮೊಮ್ಮಗಳನ್ನು ನಾನು ಎತ್ತಿ ಆಡಿಸಬೇಕು ಅನ್ನುವ ಆಸೆ ಇದೆ. ಅಂಥಾ ಆಸೆ ಸಹಜ ತಾನೇ? ಆದರೆ.. ಈ ತಿರುಬೋಕಿಯನ್ನು ಕಟ್ಟಿಕೊಂಡು ಆ ಸೊಸೆ ಅದೆಂಥಾ ಸುಖ ಪಟ್ಟಾಳು..' ಎಂದಳು ಅನುಸೂಯಾ.

ಅನುಸೂಯಾಳ ಮಾತು ನನಗೂ ನನ್ನಾಕೆಗೂ ಸರಿ ಅನ್ನಿಸಿತು.

ಇಲ್ಲ.. ತಿರುಬೋಕಿಯ ತಿರುಗಾಟ ಕಡಿಮೆ ಆಗಲೇ ಇಲ್ಲ.

ಈಗೀಗ ವಾರಕ್ಕಲ್ಲ.. ತಿಂಗಳಗಟ್ಟಲಾದರೂ ಅವನ ಮುಖ ದರ್ಶನ ನಮಗೆ ಸಿಗುತ್ತಿರಲಿಲ್ಲ.


ನಮ್ಮ ಪುಣ್ಯ.. ಅಥವಾ.. ಆ ಅನುಸೂಯಾಳ ಪುಣ್ಯ.. ತಿರುಬೋಕಿಯ ತಿರುಗಾಟ ಏನಿದ್ದರೂ ನಮ್ಮ ನಾಡಿನಲ್ಲಿ.. ನಮ್ಮ ದೇಶದಲ್ಲಿ..ದೇಶ ಬಿಟ್ಟು ವಿದೇಶಕ್ಕೆ ಹೋಗುವ ಅಪೇಕ್ಷೆ ಅವನಿಗಿರಲಿಲ್ಲ. ಆ ಬಗ್ಗೆ ನಾನು ಒಮ್ಮೆ ಅವನ ಬಳಿ ಕೇಳಿದೆ: 'ಏನೋ ತಿರುಬೋಕಿ..ನೀನು ನಮ್ಮ ನಾಡು, ನಮ್ಮ ದೇಶ ಸುತ್ತಿದ್ದೀಯೆ; ಸುತ್ತುತ್ತಿದ್ದೀಯೆ.. ಹೊರ ದೇಶಕ್ಕೆ ಹೋಗಬೇಕು ಅನ್ನಿಸುವುದಿಲ್ಲವೇ ನಿನಗೆ?'

'ಸರ್.. ನಮ್ಮ ದೇಶದ ಹಲವು ಸ್ಥಳಗಳನ್ನು ನಾನು ಸುತ್ತಾಡುತ್ತಿದ್ದೇನೆ; ಸುತ್ತಾಡಿದ್ದೇನೆ.. ನಿಜ. ಆದರೆ..ಇನ್ನೂ ಪೂರ್ತಿಯಾಗಿ ನಮ್ಮ ದೇಶ ನೋಡಿಲ್ಲ ನಾನು. ಅಲ್ಲದೆ..ಸರ್.. ನಮ್ಮ ದೇಶದಲ್ಲಿ ಇಲ್ಲದೇ ಇರೋ ಅಂಥಾ ವಿಶೇಷ ಬೇರೆ ದೇಶಗಳಲ್ಲಿ ಏನುಂಟು? ನಮ್ಮ ದೇಶಕ್ಕಿಂತ ಆ ದೇಶಗಳಲ್ಲಿ ಸ್ವಚ್ಛತೆ ಇರಬಹುದು. ಜನರೂ ಸಾಕಷ್ಟು ಸಂಪಾದನೆ ಮಾಡುತ್ತಾ ಶ್ರೀಮಂತ ಬದುಕು ಬದುಕುತ್ತಿರಬಹುದು. ಆದರೆ..ಸರ್.. ನಮ್ಮ ದೇಶದ ಜನರಿಗಿರುವ ಮಾನವೀಯತೆ ಅವರಲ್ಲಿ ಉಂಟಾ? ನಮ್ಮ ದೇಶದ ಜನರ ಹಾಗೆ ಅವರು ಕಷ್ಟ ಸುಖ ಹಂಚಿಕೊಳ್ಳುತ್ತಾರಾ? ಪರಸ್ಪರ ಹೇಳಿಕೊಳ್ಳುತ್ತಾರಾ? ಕಡಿಮೆ ಸಂಪಾದಿಸಿದರೂ ಇದ್ದಷ್ಟರಲ್ಲಿಯೇ ತೃಪ್ತಿ ಪಟ್ಟುಕೊಳ್ಳುವ ನಮ್ಮ ದೇಶದವರ ಸ್ವಭಾವ ಅವರದಾ..? ಹಾಗಾಗಿ ನನಗೆ ವಿದೇಶಕ್ಕೆ ಹೋಗಬೇಕು..ಅಲ್ಲಿಯ ಸ್ಥಳಗಳನ್ನು ನೋಡಬೇಕು..ಅಲ್ಲಿಯ ಜನರ ಸ್ವಭಾವ ತಿಳಿದುಕೊಳ್ಳಬೇಕು ಅಂತ ಅನ್ನಿಸುವುದೇ ಇಲ್ಲ' ಎಂದ ತಿರುಬೋಕಿ.

## ಬದಲಾವಣೆ

ಕುಡುಕರು ಮುಂಚೆ
ಓಲಾಡ್ಕೊಂಡು ಮನೆಗೆ
ಬರ್ತಿದ್ರು;
ಈಗ
ಓಲಾ ಮಾಡ್ಕೊಂಡು
ಮನೇಗ್ ಬರ್ತಾರೆ!

—ವಿ. ಹೇಮಂತಕುಮಾರ



ಈಶ್ವರ